UASB Library
Newspaper Clippings
Monday 22-08-2022 Pg .1
Jai Kisan

ಕೃಷಿ ಮೇಳದಲ್ಲಿ ಸಿರಿಧಾನ್ಯ, ತಾಂತ್ರಿಕತೆಗೆ ಆದ್ಯತೆ

ನ.3ರಿಂದ 6ರವರೆಗೆ ಮೇಳ | ಸೆನ್ಸಾರ್, ಆಧಾರಿತ ಯಂತ್ರಗಳ ಪ್ರದರ್ಶನ | ಕೊರಲೆಯ ಹೊಸ ತಳಿ ಅಭಿವೃದ್ಧಿ

• ಸಿದ್ದು ಚಿಕ್ಕಬಳ್ಳೇಕೆರೆ
ಕನ್ನಡಪ್ರಭ ವಾರ್ತೆ ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಈ ಬಾರಿ ಆಯೋಜಿಸಲಿರುವ 'ಕೃಷಿ ಮೇಳ'ದಲ್ಲಿ ಸಿರಿಧಾನ್ಯ ಮತ್ತು ಬೇಸಾಯದಲ್ಲಿ ತಾಂತ್ರಿಕತೆ ಅಳವಡಿಕೆ ಬಗ್ಗೆ ಹೆಚ್ಚು ಮಾಹಿತಿ ನೀಡಲು ಮುಂದಾಗಿದೆ.

ಕೇಂದ್ರ ಸರ್ಕಾರವು 2023 ಅನ್ನು 'ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ'ವಾಗಿ ಘೋಷಣೆ ಮಾಡಿರುವುದರಿಂದ ಇದೇ ಮೊದಲ ಬಾರಿಗೆ ವಿವಿಯು ಕೊರಲೆಯ ಹೊಸ ತಳಿಯನ್ನು ಅಭಿವೃದ್ಧಿಪಡಿಸಿದೆ. ಜಿಪಿಯುಬಿಟಿ-2 ಎಂಬ ಹೊಸ ತಳಿ ಇದಾಗಿದ್ದು, ಎಕರೆಗೆ 6ರಿಂದ 8 ಕ್ವಿಂಟಾಲ್ ಇಳುವರಿ ಬರಲಿದೆ. ಎಲೆ ಅಂಗಮಾರಿ ರೋಗಕ್ಕೆ ನಿರೋಧಕತೆಯನ್ನು ಹೊಂದಿದ ತಳಿ ಇದಾಗಿದ್ದು, ಹೆಚ್ಚು ಮೇವು ಸಹ ಒದಗಲಿದೆ. 85ರಿಂದ 90 ದಿನದಲ್ಲಿ ಕಟಾವಿಗೆ ಬರಲಿದೆ.

ನವೆಂಬರ್ 3ರಿಂದ 6ರವರೆಗೆ 4 ದಿನ ಕೃಷಿ ಮೇಳ ಆಯೋಜಿಸುವ ಸಾಧ್ಯತೆ ಇದ್ದು, ತಾಂತ್ರಿಕತೆಗೂ ಒತ್ತು ನೀಡಲಾಗಿದೆ. ಹೈಡ್ರೋ ಪಾನಿಕ್ಸ್, ಸೆನ್ಸಾರ್ ಆಧಾರಿತ ಮತ್ತು ಸ್ವಯಂ ಚಾಲಿತ ಯಂತ್ರೋಪಕರಣಗಳನ್ನು ಈ ಸಲ ಹೆಚ್ಚಾಗಿ ಪ್ರದರ್ಶಿಸಲಾಗುವುದು. ಕೃಷಿ ಕಾರ್ಮಿಕ ಕರ ಕೊರತೆ ಮತ್ತು ಪಾರಂಪರಿಕ ಪದ್ಧತಿಯಿಂದ ವ್ಯವಸಾಯಕ್ಕೆ ಅಧಿಕ ವೆಚ್ಚ ಆಗುತ್ತಿರುವುದರಿಂದ ಇದಕ್ಕೆ ಪರ್ಯಾಯವಾಗಿ ಯಂತ್ರೋಪಕರಣಗಳ ಬಳಕೆಯನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಪ್ರಾತ್ಯಕ್ಷಿಕೆಗಳನ್ನು ನೀಡಲು ವಿವಿ ಮುಂದಾಗಿದೆ.

ದಾಖಲೆಯ 9 ತಳಿ ಬಿಡುಗಡೆ: ಕೃಷಿ ಮೇಳದ ಹಿನ್ನೆಲೆಯಲ್ಲಿ ಪ್ರತಿ ವರ್ಷ ವಿವಿಯು ಹೊಸ ತಳಿಗಳನ್ನು ಬಿಡುಗಡೆ ಮಾಡುವುದು ಸಂಪ್ರದಾ ಯವಾಗಿದೆ. ಈ ಬಾರಿ 9 ತಳಿಗಳನ್ನು ಬಿಡುಗಡೆ



ಮಾಡುತ್ತಿರುವುದು ವಿಶೇಷವಾಗಿದೆ. ಸಾಮಾನ್ಯವಾಗಿ 3ರಿಂದ 6 ತಳಿಗಳನ್ನು ಬಿಡುಗಡೆ ಮಾಡಲಾಗುತ್ತಿತ್ತು. ಈ ಸಲ ಭತ್ತ ಕೆಎಂಪಿ-225, ಆರ್ಎನ್ಆರ್-15048, ಮುಸುಕಿನ ಜೋಳ ಎಂಎಎಚ್-14-138, ಕೊರಲೆ ಜಿಪಿಯು ಬಿಟಿ-2, ಅವರೆ ಎಚ್ಎ-5, ಎಳ್ಳು ಜಿಕೆವಿಕೆಎಸ್-1(ಭರಣಿ), ಹುಚ್ಚೆಳ್ಳು ಕೆಬಿಎನ್-2, ಹರಳು ಐಸಿಎಚ್-66, ಮೇವಿನ ಜೋಳ ಸಿಎನ್ಎಫ್ಎಸ್-1 ತಳಿಗಳನ್ನು ಅನಾವರಣ ಗೊಳಿಸಲಾಗುವುದು.

6 ಚೌಕಟ್ಟಿನ ಜೇನು ಗೂಡು ಪ್ರಯೋಗ: ಶಿಫಾರಸು ಮಾಡಲಾಗುತ್ತಿರುವ 8 ಚೌಕಟ್ಟಿನ ಜೇನುಗೂಡುಗಳಿಗೆ ಹೋಲಿಸಿದರೆ 6 ಚೌಕಟ್ಟಿನ ಜೇನುಗೂಡುಗಳು ಉತ್ತಮವೇ ಎಂಬ

- 2023ನೇ ಇಸ್ವಿಯನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ ಎಂದು ಘೋಷಿಸಿರುವ ಕೇಂದ್ರ ಸರ್ಕಾರ
- ಇದೇ ಮೊದಲ ಬಾರಿಗೆ ಕೊರಲೆಯ ಹೊಸ ತಳಿಯನ್ನು ಅಭಿವೃದ್ಧಿಪಡಿಸಿರುವ ಕೃಷಿ ವಿವಿ
- ಎಕರೆಗೆ 6ರಿಂದ 8 ಕ್ವಿಂಟಲ್ ಇಳುವರಿ ತರುವ 'ಜಿಪಿಯುಬಿಟಿ-2' ತಳಿ. 90 ದಿನದಲ್ಲಿ ಕಟಾವಿಗೆ
- ಈ ವರ್ಷ 9 ಹೊಸ ತಳಿಗಳ ಬಿಡುಗಡೆಗೆ ಸಜ್ಜಾಗಿದೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ
- ಕಳೆ ವರ್ಷ ಭಾರಿ ಮಳೆಯ ನಡುವೆಯೂ 8.5 ಲಕ್ಷ ಜನರಿಂದ ನೇರವಾಗಿ ಕೃಷಿ ಮೇಳ ವೀಕ್ಷಣೆ

ನಿಟ್ಟಿನಲ್ಲಿ ವಿವಿ ಸಂಶೋಧನೆ ನಡೆಸುತ್ತಿದೆ. ಕುಟುಂಬ ಪಲಾಯನ ಗುಣವು 8 ಚೌಕಟ್ಟುಗಳ ಗೂಡುಗಳಲ್ಲಿ ಶೇ.28 ಇದ್ದರೆ, 6 ಚೌಕಟ್ಟಿನ ಗೂಡುಗಳಲ್ಲಿ ಶೇ.16 ಮಾತ್ರ ಇದೆ. ಇದರಿಂದಾಗಿ ಹೆಚ್ಚು ಜೇನು ಸಂಗ್ರಹವಾಗುತ್ತಿದ್ದು, ಇದರ ಪರೀಕ್ಷೆಯೂ ನಡೆಯುತ್ತಿದೆ. ಕೃಷಿ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಒಟ್ಟು 30ಕ್ಕೂ ಅಧಿಕ ತಂತ್ರಜ್ಞಾನಗಳನ್ನು ವಿವಿಯು ಸಂಶೋಧಿಸಿದ್ದು, ಮೇಳದಲ್ಲಿ ರೈತರು ಮತ್ತು ಆಸಕ್ತರು ಇದನ್ನು ಕಣ್ತುಂಬಿಕೊಳ್ಳಬಹುದು. ಕಳೆದ ವರ್ಷ ಎಡಬಿಡದೆ ಸುರಿದ ಮಳೆಯ ನಡುವೆಯೂ ಎಂಟೂವರೆ ಲಕ್ಷ ಜನರು ಕೃಷಿ ಮೇಳಕ್ಕೆ ಭೇಟಿ ನೀಡಿದ್ದರು. ಇದಲ್ಲದೇ ಆನ್ ಲೈನ್‌ನಲ್ಲಿ ಸುಮಾರು 35 ಲಕ್ಷ ಜನ ವೀಕ್ಷಿಸಿದ್ದರು.



ಕೃಷಿ ಮೇಳಕ್ಕೆ ಈ ಬಾರಿ 15 ಲಕ್ಷ ಜನರ ಭೇಟಿ ನಿರೀಕ್ಷೆ

ಈ ಬಾರಿ ಕೃಷಿ ಮೇಳಕ್ಕೆ ವರುಣನ ಅಡ್ಡಿ ಉಂಟಾಗದಿದ್ದರೆ ಸುಮಾರು 15 ಲಕ್ಷ ಜನ ಭೇಟಿ ನೀಡುವ ನಿರೀಕ್ಷೆಯಿದೆ. ಸಿರಿಧಾನ್ಯ ಮತ್ತು ತಾಂತ್ರಿಕತೆಗೆ ಆದ್ಯತೆ ನೀಡಲಾಗಿದೆ. ತಳಿಗಳ ಸಂಶೋಧನೆಯ ಫಲಿತಾಂಶವು ಹೊರ ಬಂದಿರುವುದರಿಂದ ಈ ಬಾರಿ 9 ಹೊಸ ತಳಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

• ಡಾ.ರಾಜೇಂದ್ರ ಪ್ರಸಾದ್
ಕುಲಪತಿ, ಬೆಂಗಳೂರು ಕೃಷಿ ವಿವಿ

22-08-2022
Kp Pg 04

22-08-2022
Vv Pg 11

For more information visit
University Library Website
Web - uasbagrilibindia.org
E-mail- librarian@uasbangalore.edu.in

ವಿ ರೈತ ಮಿತ್ರ

ಮಳೆಯಾಶ್ರಿತದಲ್ಲಿ ಬೆಳೆ ನಷ್ಟ ತಡೆಯಲು ಪರ್ಯಾಯ ಬೆಳೆ ಪದ್ಧತಿಗಳ ಬಗ್ಗೆ ತಿಳಿಸಿ.

| ರಾಘವೇಂದ್ರ ದಡಮುಡಕೆ ಗ್ರಾಮ, ನಾಗಮಂಗಲ ತಾಲೂಕು

ಖುಷ್ಕಿ ಬೇಸಾಯದಲ್ಲಿ ಸೂಕ್ತವಾದ ಬೆಳೆ, ಬೆಳೆಯಲ್ಲಿ ತಳಿಗಳ ಆಯ್ಕೆ, ಬೆಳೆ ಪದ್ಧತಿಗಳು ಮತ್ತು ಬೇಸಾಯ ಕ್ರಮಗಳು ಉತ್ಪಾದಕತೆ ನಿರ್ಧರಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಮಳೆಯಾಶ್ರಿತದಲ್ಲಿ ಕಾಲಮಾನ ಅನುಸರಿಸಿ ಬೆಳೆಗಳನ್ನೂ ಹಾಗೂ ಇತರ ಬೆಳೆ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಕೃಷಿ-ತೋಟಗಾರಿಕಾ ಪದ್ಧತಿಯಲ್ಲಿ ಮಾವು / ಸಪೋಟಾ / ತೆಂಗು + ರಾಗಿ / ಅಲಸಂದೆ / ಅವರೆ / ದಂಟು ಇತ್ಯಾದಿಯನ್ನು ಮೊದಲ 5-7 ವರ್ಷಗಳಲ್ಲಿ ಅಳವಡಿಸಬಹುದು. ಸಮಗ್ರ ಕೃಷಿ ಪದ್ಧತಿಯಲ್ಲಿ ಬೆಳೆಯ ಜತೆಗೆ ಹೈನುಗಾರಿಕೆ, ಕುರಿ / ಮೇಕೆ, ಕೃಷಿ ಹೊಂಡದಲ್ಲಿ ಮೀನು ಸಾಕಣೆ ಅಳವಡಿಸಿಕೊಳ್ಳುವುದರಿಂದ ಆಹಾರ, ಪೋಷಕಾಂಶ, ಆರ್ಥಿಕ ಮತ್ತು ಜೀವನೋಪಾಯ ಭದ್ರತೆ ಜತೆಗೆ ಉದ್ಯೋಗ ಭದ್ರತೆ ಪಡೆಯಬಹುದು. ಶೀಘ್ರವಾಗಿ ಬೆಳೆಯುವ ಸರ್ವೆಮರ, ಹೆಬ್ಬೇವು, ಸಿಲ್ವರ್ ಓಕ್ ಮರಗಳನ್ನು ಬದುಗಳ ಮೇಲೆ (ಪೂರ್ವ-ಪಶ್ಚಿಮವಾಗಿ) ಬೆಳೆದು 7-8 ವರ್ಷಗಳ ನಂತರ ಕಟಾವು ಮಾಡುವುದು. ಹೊಂಗೆ, ಹುಣಸೆ, ಬೀಟಿ, ಮತ್ತು ಬೆಂಗಾಳಿ ಜಾಲಿ ಮರಗಳನ್ನು ಸ್ಟೈಲೊದೊಂದಿಗೆ ಸಾಗುವಳಿಗೆ ಯೋಗ್ಯವಲ್ಲದ ಜಮೀನುಗಳಲ್ಲಿ ಅರಣ್ಯ-ಮೇವು ಪದ್ಧತಿಯಲ್ಲಿ ಬೆಳೆಗಳನ್ನು ಮಿಶ್ರ ಮಾಡಿ ಬೆಳೆಯಬಹುದು.

| ಹರ್ಷಕುಮಾರ್ ಎಸ್.ಎಸ್. ಬೇಸಾಯ ತಜ್ಞರು



ಹಿಪ್ಪುನೇರಳೆ ಬೆಳೆಯಲ್ಲಿ ಎಲೆ ಚುಕ್ಕೆ ರೋಗ ನಿಯಂತ್ರಿಸುವುದು ಹೇಗೆ?

| ಅನಿಲ್ ಶಿಡ್ಲಘಟ್ಟ ತಾಲೂಕು

ಈ ರೋಗವು ಜೂನ್‌ನಿಂದ ಅಕ್ಟೋಬರ್‌ವರೆಗೆ ಕಂಡುಬರುತ್ತದೆ. ಪ್ರಾರಂಭದಲ್ಲಿ ತಿಳಿ ಕಂದು ಬಣ್ಣದ ಸಣ್ಣ ಚುಕ್ಕೆಗಳು ಎಲೆಗಳ ಮೇಲೆ ಕಾಣಿಸಿಕೊಂಡು ಕ್ರಮೇಣ ದೊಡ್ಡದಾಗಿ, ಗಾಢ ಕಂದುಬಣ್ಣಕ್ಕೆ ತಿರುಗುತ್ತವೆ ಮತ್ತು ಚುಕ್ಕೆಗಳ ಸುತ್ತಲಿನ ಬಣ್ಣ ಹಳದಿಯಾಗುತ್ತದೆ. ತೀವ್ರ ರೋಗಕ್ಕೊಳಗಾದ ಎಲೆಗಳು ಹಳದಿಯಾಗಿ ಉದುರುತ್ತವೆ.

ನಿರ್ವಹಣೆ: ರೋಗಪೀಡಿತ ಎಲೆಗಳನ್ನು ಆರಿಸಿ ಸುಡಬೇಕು. ಇದರಿಂದ ರೋಗಾಣು ಮಳೆ ಗಾಳಿಯಿಂದ ಹರಡುವುದನ್ನು ತಡೆಯಬಹುದು. ಕ್ರಮಬದ್ಧವಾಗಿ ಪಾಲಿಸಿದರೆ ರಾಸಾಯನಿಕ ಬಳಸದೆ ಸಾವಯವ ವಿಧಾನದಿಂದಲೇ ಯಶಸ್ವಿಯಾಗಿ ನಿಯಂತ್ರಣ ಮಾಡಬಹುದಾಗಿದೆ. ಅವಶ್ಯವಿದ್ದಲ್ಲಿ ಮಾತ್ರ ಶೇ.0.2ರ ಕಾರ್ಬೆಂಡೆಜಿಮ್ ಅಥವಾ ಬೆನಾಮಿಲ್ ಶಿಲೀಂಧ್ರನಾಶಕ ಸಿಂಪಡಿಸಬೇಕು. ಅವಶ್ಯವಿದ್ದಲ್ಲಿ 15 ದಿನಗಳ ನಂತರ ಮತ್ತೊಮ್ಮೆ ಇದನ್ನು ಸಿಂಪಡಿಸಬಹುದು. ಸೂಚನೆ: ರಾಸಾಯನಿಕವನ್ನು ಸಿಂಪಡಿಸಿದ 10 - 15 ದಿನಗಳ ನಂತರ ಎಲೆಗಳನ್ನು ಹುಳುಗಳಿಗೆ ನೀಡಬಹುದು.

| ಪ್ರಿಯಾಂಕ ಬಿ. ಸಸ್ಯರೋಗ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

ಸರ್ಕಾರಕ್ಕೆ ಭಾರತೀಯ ಕಿಸಾನ್ ಸಂಘ ಸಲಹೆ

ಸಾವಯವ ಕೃಷಿಗೆ ಮಹತ್ವ ಬರಲಿ ರೈತರಿಗೆ ಲಾಭದಾಯಕ ಬೆಲೆ ಸಿಗಲಿ

ಬೆಂಗಳೂರು: ದೇಶದಲ್ಲಿ ಸರ್ಕಾರಗಳ ಮೇಲೆ ಪ್ರಭಾವ ಬೀರುತ್ತಿರುವ ಬಿತ್ತನೆ ಬೀಜ, ರಸಗೊಬ್ಬರ ಕಂಪನಿಗಳಿಗಿಂತ ರೈತಶಕ್ತಿಯು ಹೆಚ್ಚು ಪ್ರಬಲವಾಗಬೇಕು. ಸೂಕ್ತ ತರಬೇತಿಯೊಂದಿಗೆ ನೈಸರ್ಗಿಕ ಮತ್ತು ಸಾವಯವ ಕೃಷಿಯನ್ನು ಪ್ರೋತ್ಸಾಹಿಬೇಕು ಎಂದು ಭಾರತೀಯ ಕಿಸಾನ್ ಸಂಘದ ಪ್ರಧಾನ ಕಾರ್ಯದರ್ಶಿ ಮೋಹಿನಿ ಮೋಹನ್ ಮಿಶ್ರಾ ಆಗ್ರಹಿಸಿದ್ದಾರೆ.



ಇತ್ತೀಚೆಗೆ ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡಿದ್ದ ಅವರು ಹೊಸದಿಗಂತ ಪತ್ರಿಕೆಗೆ ನೀಡಿದ ವಿಶೇಷ ಸಂದರ್ಶನದಲ್ಲಿ ತಮ್ಮ ಮನದಾಳ ಹಂಚಿಕೊಂಡಿದ್ದು, ರೈತರು ಹಾಗೂ ಸರ್ಕಾರಗಳಿಗೆ ಕೆಲ ಸಲಹೆಗಳನ್ನು ನೀಡಿದ್ದಾರೆ.

ಕೃಷಿ ವಲಯದಲ್ಲಿ ನೀತಿ ನಿರೂಪಿಸುವಲ್ಲಿ ಕಿಸಾನ್ ಸಂಘ ಕೈಜೋಡಿಸುತ್ತದೆ. ಮಾರುಕಟ್ಟೆ ಹಾಗೂ ರಫ್ತು ಮತ್ತು ಆಮದು ನೀತಿಗಳಲ್ಲಿ ಸಾಕಷ್ಟು ಬದಲಾವಣೆಗಳಾಗಬೇಕಿದ್ದು, ರೈತರ ಮೇಲೆ ವಿವಿಧ ರೀತಿಯ ಹೆಚ್ಚಿನ ತೆರಿಗೆ ಹೊರೆಗಳು ಬೀಳುತ್ತಿದ್ದು, ಇದನ್ನು ತಪ್ಪಿಸಲು ಸರ್ಕಾರ ಕ್ರಮ ವಹಿಸಬೇಕು. ಆಹಾರ ಭದ್ರತೆ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದ ಧಾನ್ಯಗಳನ್ನು ಸರ್ಕಾರ ಖರೀದಿಸಬೇಕು. ↘9

> **ಕೋವಿಡ್ ಸಂದರ್ಭದಲ್ಲಿ ಎಲ್ಲ ವಲಯಗಳೂ ಸ್ತಬ್ಧವಾಗಿದ್ದವು. ಆದರೆ, ರೈತರು ಮಾತ್ರ ಕೆಲಸ ಮಾಡುತ್ತಿದ್ದರು. ಇದರಿಂದ ಎಲ್ಲರಿಗೂ ಆಹಾರ ಸಿಗುವಂತಾಯಿತು. ಕೃಷಿ ಕ್ಷೇತ್ರದ ಮಹತ್ವವನ್ನು ಎಲ್ಲರೂ ಅರಿಯಬೇಕು. ರೈತರ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಸಿಗಬೇಕು. ಲಾಭದಾಯಕ ಬೆಲೆ ಸಿಗಬೇಕು. ಬಿತ್ತನೆ ಬೀಜ, ರಸಗೊಬ್ಬರ ಕಂಪನಿಗಳ ಲಾಬಿಗಿಂತ ಹೆಚ್ಚು ರೈತಶಕ್ತಿ ಸಬಲವಾಗಬೇಕು. ಇದಕ್ಕಾಗಿ ಕೃಷಿಕರಿಗೆ ಸೂಕ್ತ ತರಬೇತಿ ಸಿಗಬೇಕು. ಗೋವು ಆಧಾರಿತ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಬೇಕು.**
>
> ■ ಮೋಹಿನಿ ಮೋಹನ್ ಮಿಶ್ರಾ, ಭಾರತೀಯ ಕಿಸಾನ್ ಸಂಘದ ಪ್ರಧಾನ ಕಾರ್ಯದರ್ಶಿ

ಇಂದಿನಿಂದ ಅಂತಾರಾಷ್ಟ್ರೀಯ ಸಮ್ಮೇಳನ

ಬೆಂಗಳೂರು : ಕೃಷಿ ವಿವಿ ಜಿಕೆವಿಕೆಯ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ಮತ್ತು ಆಹಾರ ವ್ಯವಸ್ಥೆಯಲ್ಲಿ ಸುಸ್ಥಿರ ಅಭಿವೃದ್ಧಿ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆ.22 ರಿಂದ 24 ಆಯೋಜಿಸಲಾಗಿದೆ. ಆ.22ರ ಬೆಳಗ್ಗೆ 10ಕ್ಕೆ ಕುವೆಂಪು ಸಭಾಂಗಣದಲ್ಲಿ ಆರಂಭವಾಗಲಿರುವ ಈ ಸಮಾವೇಶವನ್ನು ಕೃಷಿ ಮತ್ತು ರೈತರ ಕಲ್ಯಾಣ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಲಿದ್ದು, ಕೃಷಿ ಸಚಿವ ಬಿ.ಸಿ ಪಾಟೀಲ್ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ಅಂತಾರಾಷ್ಟ್ರೀಯ ಜೋಳ ಮತ್ತು ಗೋಧಿ ಸಂಶೋಧನಾ ಕೇಂದ್ರದ ಡಾ.ಅರುಣ್ ಕುಮಾರ್ ಕೆ ಜೋಶಿ, ಭಾರತೀಯ ಅನುಸಂಧಾನ ಪರಿಷತ್‌ನ ಉಪ ಮಹಾನಿರ್ದೇಶಕ ಡಾ.ಎ.ಕೆ.ಸಿಂಗ್ ಮತ್ತು ಅಂತಾರಾಷ್ಟ್ರೀಯ ಕೃಷಿ ಯುವಜನ ಸಬಲೀಕರಣ ನಿರ್ದೇಶಕ ಕು.ಗೆನ್ನಾ ಟೆಸ್ಲೆಲ್ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಸಾವಯವ ಕೃಷಿಗೆ ಮಹತ್ವ ಬರಲಿ, ರೈತರಿಗೆ ಲಾಭದಾಯಕ ಬೆಲೆ ಸಿಗಲಿ

೧ ಇಲ್ಲವೇ ರೈತರು ಹಾಗೂ ಖರೀದಾರರ ನಡುವೆ ದಲ್ಲಾಳಿಗಳು ಇಲ್ಲದಂತೆ ನೋಡಿಕೊಳ್ಳಬೇಕು. ಆಗ ತೆರಿಗೆಯೂ ಹೊರೆಯಾಗುವುದಿಲ್ಲ, ರೈತರು ಮತ್ತು ಗ್ರಾಹಕರಿಬ್ಬರಿಗೂ ಆಗುವ ನಷ್ಟ ತಪ್ಪುತ್ತದೆ. ನಗರ ಅಥವಾ ಪಟ್ಟಣಗಳಲ್ಲಿರುವ ಮಾರುಕಟ್ಟೆ ಪ್ರಾಂಗಣಗಳು ಗ್ರಾಮೀಣ ಪ್ರದೇಶವನ್ನು ತಲುಪಬೇಕು. ಇದಕ್ಕಾಗಿ 2 ಸಾವಿರ ಕೋಟಿ ರೂ. ಕಾರ್ಪಸ್ ಫಂಡ್ ಇಟ್ಟರೂ ಪ್ರಯೋಜನವಾಗಿಲ್ಲ. ಇದು ಸದುಪಯೋಗ ಆಗಬೇಕು.

ವಾಣಿಜ್ಯ-ಕೃಷಿ ಇಲಾಖೆ ನಡುವೆ ಸಮನ್ವಯತೆ: ಖಾಸಗಿ ಖರೀದಿದಾರರು ನಮ್ಮಿಂದ ಕಡಿಮೆ ದರಕ್ಕೆ ಖರೀದಿಸಿ ಹೆಚ್ಚಿನ ದರಕ್ಕೆ ರಫ್ತು ಮಾಡಲು ಅವಕಾಶ ಮಾಡಿಕೊಡಬೇಕು. ಆದಕ್ಕಾಗಿ ಉತ್ಪನ್ನದ ಸಂಸ್ಕರಣೆಯಿಂದ ಮಾರುಕಟ್ಟೆವರೆಗೆ ಸರ್ಕಾರ ರೈತರ ಬೆನ್ನಿಗೆ ನಿಲ್ಲಬೇಕು. ವಾಣಿಜ್ಯ ಮತ್ತು ಕೃಷಿ ಇಲಾಖೆ ನಡುವೆ ಸಮನ್ವಯತೆ ಇರಬೇಕು. ರಫ್ತು ನೀತಿಯನ್ನು ರೈತ ಕೇಂದ್ರಿತವಾಗಿ ಮಾಡಿದರೆ ಮಾತ್ರ ಲಾಭ ಸಿಗಲು ಸಾಧ್ಯ.

ಸಬ್ಸಿಡಿ ಬೇಡ, ಲಾಭದಾಯಕ ಬೆಲೆ ಬೇಕು: ನಮಗೆ ಸರ್ಕಾರದ ಸಬ್ಸಿಡಿ, ನೆರವು ಇತ್ಯಾದಿಗಳಿಗಿಂತ ಲಾಭದಾಯಕ ಬೆಲೆ ಬೇಕು. 90 ಸಾವಿರ ಕೋಟಿ ರೂ. ಯೂರಿಯಾ ಕಂಪನಿಗಳು ಸಬ್ಸಿಡಿ ಪಡೆಯುತ್ತಿವೆ. ಇದು ರೈತರ ಖಾತೆಗೆ ನೇರವಾಗಿ ಸಿಗುವಂತಾಗಬೇಕು. ಸಗಣಿ, ಕಾಂಪೋಸ್ಟ್ ಇತ್ಯಾದಿಗಳನ್ನು ಬಳಸುತ್ತಿರುವ ರೈತರೂ ಇದ್ದಾರೆ. ಅವರಿಗೆ ಇದರಿಂದ ಯಾವುದೇ ಪ್ರಯೋಜನವಾಗುತ್ತಿಲ್ಲ. ರಸಗೊಬ್ಬರ ಕಂಪನಿ, ರಾಸಾಯನಿಕ ಕಾರ್ಖಾನೆಗಳ ಭ್ರಷ್ಟಾಚಾರದ ಲಾಬಿಯಿಂದಾಗಿ ರೈತರಿಗೆ ನಷ್ಟವಾಗುತ್ತಿದೆ. ಈ ಲಾಬಿಗಿಂತ ರೈತರ ಲಾಬಿ ಹೆಚ್ಚಾಗಬೇಕು. ರೈತರು ಸಶಕ್ತರಾಗಬೇಕು.

1 ಲಕ್ಷ ಗ್ರಾಮ ತಲುಪುವ ಗುರಿ

ಭಾರತೀಯ ಕಿಸಾನ್ ಸಂಘವು ದೇಶದಲ್ಲಿ ಅತಿದೊಡ್ಡ ರೈತ ಸಂಘಟನೆ. ಕೃಷಿ ಕ್ಷೇತ್ರದಲ್ಲಿ ಸರ್ಕಾರ ಮಾಡಬಹುದಾದ ಅನೇಕ ಸುಧಾರಣೆಗಳನ್ನು ಕಿಸಾನ್ ಸಂಘ ಮಾಡುತ್ತಿದ್ದು, ದೇಶಾದ್ಯಂತ 25 ಲಕ್ಷ ಸದಸ್ಯರನ್ನು ಹೊಂದಿದೆ. 560 ಜಿಲ್ಲೆಗಳಲ್ಲಿ ಸಕ್ರಿಯವಾಗಿರುವ ಸಂಘವು 1 ಲಕ್ಷ ಗ್ರಾಮಗಳನ್ನು ತಲುಪುವ ಗುರಿ ಹೊಂದಿದ್ದು, ಸಾವಯವ ಕೃಷಿಯ ಬಗ್ಗೆ ರೈತರಿಗೆ ತರಬೇತಿ ನೀಡುತ್ತಿದೆ. ಅಷ್ಟೇ ಅಲ್ಲದೆ, ರೈತರ ಉತ್ಪನ್ನಗಳಿಂದ ಉಪ ಉತ್ಪನ್ನ ತಯಾರಿ, ಸಂಸ್ಕರಣೆ ಹಾಗೂ ಮಾರುಕಟ್ಟೆ ಒದಗಿಸುವ ನಿಟ್ಟಿನಲ್ಲಿಯೂ ಸಾಕಷ್ಟು ಶ್ರಮಿಸುತ್ತಿದೆ. ಸರ್ಕಾರ ತನ್ನ ನೀತಿ ನಿರೂಪಣೆಯಲ್ಲಿ ಬದಲಾವಣೆ ತಂದರೆ, ಕೃಷಿ ವಲಯದಲ್ಲಿ ಸುಧಾರಣೆ ಸಾಧ್ಯವಿದೆ. ಗೋ ಆಧಾರಿತ ನೈಸರ್ಗಿಕ ಮತ್ತು ಸಾವಯವ ಕೃಷಿ ತರಬೇತಿಯನ್ನು ಸರ್ಕಾರ ತನ್ನ ಬಳಿಯಿರುವ 70 ಕೃಷಿ ವಿವಿ, 120 ಸಂಶೋಧನಾ ಕೇಂದ್ರ, 750 ಕೃಷಿ ವಿಜ್ಞಾನ ಕೇಂದ್ರಗಳನ್ನು ಬಳಸಿಕೊಂಡು ತರಬೇತಿ ಕೊಡಬೇಕು.

ಕಿಸಾನ್ ಸಮ್ಮಾನ್ ನಮ್ಮದೇ ಶಿಫಾರಸು



ಸಹಕಾರ ಸಂಘಗಳಿಂದ ಪಡೆದ ಸಾಲವನ್ನು ರೈತರು ಬಹುತೇಕ ತೀರಿಸುತ್ತಿದ್ದರು. ಇಲ್ಲದಿದ್ದರೆ, ಸರ್ಕಾರ ಮನ್ನಾ ಮಾಡುತ್ತಿತ್ತು. ಇದರಿಂದ ರೈತರಿಗಿಂತ ಹೆಚ್ಚು ಸಹಕಾರ ಸಂಘಗಳಿಗೆ ಲಾಭವಾಗುತ್ತಿತ್ತು. ಇದರ ಬದಲು ರೈತರು ಹೆಚ್ಚು ಸಾಲ ಮಾಡದೆಯೇ ಸಕಾಲದಲ್ಲಿ ಸರ್ಕಾರದಿಂದಲೇ ಹಣ ಸಿಗುವಂತಾಗಬೇಕು ಎಂಬ ಕಾರಣದಿಂದ ಕಿಸಾನ್ ಸಮ್ಮಾನ್ ಯೋಜನೆಯನ್ನು ಭಾರತೀಯ ಕಿಸಾನ್ ಸಂಘವೇ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಶೇ.80 ರಷ್ಟು ಸಣ್ಣ ರೈತರಿಗೆ ಇದು ಬಹಳ ಅನುಕೂಲ ಮಾಡಿಕೊಟ್ಟಿದೆ. ರೈತರ ಆತ್ಮಹತ್ಯೆ ಪ್ರಕರಣಗಳನ್ನು ತಡೆಯಲು ಸಹಕಾರಿಯಾಗಿದೆ. ಕೆಲ ರಾಜ್ಯಗಳಲ್ಲಿ ಸ್ಥಳೀಯ ಸರ್ಕಾರಗಳು ಇದರಲ್ಲೂ ರಾಜಕೀಯ ಮಾಡುತ್ತಿವೆ. ಆದರೆ, ಕರ್ನಾಟಕ ಸರ್ಕಾರವು ಕೇಂದ್ರದ 6 ಸಾವಿರ ರೂ. ಜೊತೆಗೆ ಹೆಚ್ಚುವರಿಯಾಗಿ 4 ಸಾವಿರ ರೂ. ನೀಡುತ್ತಿರುವುದು ಸಂತೋಷದ ವಿಚಾರ. ಉಳಿದ ರಾಜ್ಯಗಳಿಗೂ ಇದು ಮಾದರಿಯಾಗಬೇಕು. ರೈತಪರ ಯೋಜನೆಯನ್ನು ಜಾರಿಗೊಳಿಸಲು ಎಲ್ಲ ರಾಜ್ಯಗಳಿಗೂ ಕರ್ನಾಟಕ ನೇತೃತ್ವ ವಹಿಸಬೇಕು.

ಗೋಧಿ ಆಮದು ಅಗತ್ಯವಿಲ್ಲ ಕೇಂದ್ರ ಸರಕಾರದ ಸ್ಪಷ್ಟನೆ

ಹೊಸದಿಲ್ಲಿ: ದೇಶದಲ್ಲಿ ಗೋಧಿ ದಾಸ್ತಾನು ಸಮರ್ಪಕವಾಗಿದ್ದು, ವಿದೇಶದಿಂದ ಆಮದು ಮಾಡಿಕೊಳ್ಳುವ ಯಾವುದೇ ಯೋಜನೆಯಿಲ್ಲ ಎಂದು ಕೇಂದ್ರ ಸರಕಾರ ಭಾನುವಾರ ಸ್ಪಷ್ಟಪಡಿಸಿದೆ. ಆಗಸ್ಟ್ ತಿಂಗಳಲ್ಲಿ ದೇಶದ ಗೋಧಿ ದಾಸ್ತಾನು ಕಳೆದ 14 ವರ್ಷಗಳಲ್ಲೇ ಕನಿಷ್ಠ ಮಟ್ಟಕ್ಕೆ ಕುಸಿದಿದ್ದು, ವಿಶ್ವಕ್ಕೆ ಆಹಾರ ವಿತರಿಸುವುದಾಗಿ ಘೋಷಿಸಿದ್ದ ಭಾರತ ತಾನೇ ಗೋಧಿ ಆಮದು ಮಾಡಿಕೊಳ್ಳುವ ಸ್ಥಿತಿಗೆ ತಲುಪಿದೆ ಎಂದು ಹಲವು ಮಾಧ್ಯಮಗಳಲ್ಲಿ ವರದಿಯಾಗಿತ್ತು.



ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವಾಲಯ ಈ ವರದಿಗಳನ್ನು ಅಲ್ಲಗಳೆದಿದ್ದು, ಸ್ಪಷ್ಟನೆ ನೀಡಿದೆ.

''ಭಾರತದಲ್ಲಿ ದೇಶೀಯ ಅಗತ್ಯಗಳಿಗೆ ಸಾಕಾಗುಷ್ಟು ಗೋಧಿ ಲಭ್ಯವಿದೆ. ಭಾರತೀಯ ಆಹಾರದ ನಿಗಮದ ಗೋದಾಮುಗಳಲ್ಲಿಯೂ ಪಡಿತರ ವ್ಯವಸ್ಥೆಯಡಿ ವಿತರಣೆಗಾಗಿ ಸಾಕಷ್ಟು ದಾಸ್ತಾನು ಇದೆ,'' ಎಂದು ಸಚಿವಾಲಯ ತಿಳಿಸಿದೆ.

ಹಲವು ರಾಜ್ಯಗಳಲ್ಲಿ ಉಷ್ಣ ಮಾರುತದಿಂದಾಗಿ ಗೋಧಿ ಉತ್ಪಾದನೆ ಕುಂಠಿತಗೊಂಡಿದೆ. ಹೀಗಾಗಿ ದಾಸ್ತಾನು ದಾಖಲೆ ಮಟ್ಟಕ್ಕೆ ಕುಸಿದಿದೆ. ಪೂರೈಕೆ ಕೊರತೆಯಿಂದ ಜಾಗತಿಕ ಗೋಧಿ ದರ 12% ಹೆಚ್ಚಳವಾಗಿದ್ದು, ಇದರ ಬಿಸಿ ಭಾರತಕ್ಕೂ ತಟ್ಟಿದೆ ಎಂದು ವರದಿಯಾಗಿತ್ತು. ಭಾರತವು ವಿಶ್ವದ ಎರಡನೇ ಅತಿದೊಡ್ಡ ಗೋಧಿ ಉತ್ಪಾದಕ ದೇಶವಾಗಿದ್ದು, 2021-2022ರಲ್ಲಿ 106.84 ದಶಲಕ್ಷ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ.

Rising Prices, Rupee Gain Hurt Tea Exports to Europe, Japan

Exporters getting inquiries from newer mkts such as Turkey, Saudi, Iraq

Sutanuka.Ghosal
@timesgroup.com



Kolkata: India's tea exports to the traditional markets of Europe and Japan have declined following an increase in tea prices and appreciation of the Indian currency. The impending fear of recession amid increasing inflationary pressure is also making buyers in Europe cautious about buying tea at higher prices.

But even as good quality Indian tea prices have soared 40-50% over the past year, exporters are witnessing more enquiries from newer markets such as Turkey, Saudi Arabia and Iraq.

"Buyers from the EU and Japan are not keen to pay higher prices. So, the offtake is less. Moreover, the British pound and Japanese yen have weakened against the rupee, which too is impacting Indian tea exports to the UK and Japan," Anshuman Kanoria, chairman of the Indian Tea Exporters Association, told ET.

According to the Tea Board, exports to Japan fell 10.71% year-on-year in the first five months of 2022, to Germany 10.33% and to the UK 2.46%.

The picture for the coming months will be clearer once export figures for the June-August period come out, said Kanoria.

However, buyers in newer markets like Iran have shown interest in Indian orthodox tea – loose-leaf tea, which is produced using traditional methods that involve plucking, withering, rolling, oxidation or fermentation and drying.

"Orthodox tea market is at an all-time high. The market is booming in Iran for Indian orthodox teas. Orthodox tea production too should be at an all-time high. Iran and the UAE together will exceed 54 million kg of tea exports from India," said Mohit Agarwal, director, Asian Tea & Exports. "The Assam government is giving full support and it has increased orthodox subsidies to ₹10 per kg."

India produces 100-120 million kg of orthodox tea annually.

Exporters are hopeful that shipments will increase to 225 million kg in 2022, as against 195 million kg in 2021.

ಉತ್ತಮ ಆದಾಯಕ್ಕೆ ಕ್ಯಾಪ್ಸಿಕಂ ಕೃಷಿ

ಸಾಮಾನ್ಯವಾಗಿ ರೈತರಿಗೆ ಆದಾಯ ತಂದು ಕೊಡುವ ಕೃಷಿಯಲ್ಲಿ ಕ್ಯಾಪ್ಸಿಕಂ ಬೆಳೆ ಕೂಡ ಒಂದು. ಕೇವಲ 1 ಎಕರೆ ಪ್ರದೇಶದಲ್ಲಿ ಕೃಷಿ ಮಾಡಿದರೆ ಸಾಕು, ವರ್ಷಕ್ಕೆ ರೈತರು ಕನಿಷ್ಠವೆಂದರೂ 17 ಲಕ್ಷ ರೂ. ಆದಾಯ ಪಡೆಯ ಬಹುದು. ಇಷ್ಟೊಂದು ಬೇಡಿಕೆ ಮತ್ತು ಬೆಲೆ ಹೊಂದಿರುವ ಈ ಬೆಳೆಯನ್ನು ದೊಡ್ಡ ಮಟ್ಟದಲ್ಲಿ ಬೆಳೆದರೆ ಎಷ್ಟು ಗಳಿಸಬಹುದು ಎಂದು ನೀವೇ ಲೆಕ್ಕ ಹಾಕಿ.

ಪ್ರಸ್ತುತ ಇತ್ತೀಚಿನ ದಿನಗಳಲ್ಲಿ ಫುಡ್ ಇಂಡಸ್ಟ್ರಿಯಲ್ಲಿ ಹೆಚ್ಚು ಬೇಡಿಕೆ ಹೊಂದಿರುವ ತರಕಾರಿಗಳಲ್ಲಿ ಕ್ಯಾಪ್ಸಿಕಂ ಕೂಡ ಒಂದಾಗಿದೆ. ಹೋಟೆಲ್ ಮತ್ತು ಕ್ಯಾಟರಿಂಗ್ ಬಿಸಿನೆಸ್‌ನಲ್ಲಿ ಇದರ ಬಳಕೆ ದಿನೇದಿನೆ ಹೆಚ್ಚುತ್ತಿದೆ. ಮೂಲತಃ ಉತ್ತರ ಅಮೆರಿಕದ ತರಕಾರಿಯಾದ ಇದನ್ನು ಸ್ಥಳೀಯವಾಗಿ ಸಿಹಿ ಮೆಣಸು, ಶಿಮ್ಲಾ ಮೆಣಸು ಹಾಗೂ ದೊಡ್ಡ ಮೆಣಸು ಸೇರಿ ವಿವಿಧ ಹೆಸರಿನಿಂದ ಕರೆಯಲಾಗುತ್ತದೆ.





ಜೇಡಿ ಮತ್ತು ಮರಳು ಮಿಶ್ರಿತ ಮಣ್ಣಿನ ಪ್ರದೇಶದಲ್ಲಿ ಸುಲಭವಾಗಿ ಬೆಳೆಯಬಹುದಾದ ಈ ತರಕಾರಿಗೆ ಹೆಚ್ಚು ಮಳೆ ಬಿಳುವ ಪ್ರದೇಶ ಸೂಕ್ತವಲ್ಲ. ಇದನ್ನು ನಗರ ಮತ್ತು ಗ್ರಾಮೀಣ ಪ್ರದೇಶ ಎರಡರಲ್ಲೂ ಬೆಳೆಯವುದಕ್ಕೆ ಸಾಧ್ಯ. ಆದರೆ ಗುಣಮಟ್ಟದ ಕಾಯಿಗಳಿಗೆ ಹೆಚ್ಚು ಬೇಡಿಕೆ ಇರುವುದರಿಂದ ಪಾಲಿಹೌಸ್‌ನಲ್ಲಿ ಕೃಷಿ ಮಾಡಿದರೆ ಖಂಡಿತಾ ಹೆಚ್ಚು ಆದಾಯ ಪಡೆಯಬಹುದು.

ಕ್ಯಾಪ್ಸಿಕಂ ಮಾರುಕಟ್ಟೆ ಮೌಲ್ಯ: ಹಸಿರು, ಕೆಂಪು ಮತ್ತು ಹಳದಿ ಬಣ್ಣಗಳ ಕ್ಯಾಪ್ಸಿಕಂಗೆ ಜಾಗತಿಕವಾಗಿ ಮತ್ತು ಸ್ಥಳೀಯವಾಗಿ ಹೆಚ್ಚು ಬೇಡಿಕೆ ಇದೆ. ಇದರಲ್ಲಿ ಜಾಗತಿಕ ಮಾರುಕಟ್ಟೆ ಮೌಲ್ಯ ನೋಡುವುದಾದರೆ 2018ರಲ್ಲಿ 8686.7 ಮಿಲಿಯನ್ ಯುಎಸ್ ಡಾಲರ್. ಅಂದರೆ, ಭಾರತದ ರೂಪಾಯಿ ಮೌಲ್ಯ 86867 ಲಕ್ಷ ರೂ. ಅದೇ 2025ಕ್ಕೆ (ಮುಂದಿನ 2.5 ವರ್ಷದಲ್ಲಿ) 12240 ಮಿಲಿಯನ್ ಯುಎಸ್ ಡಾಲರ್ ಆಗುವ ನಿರೀಕ್ಷೆ ಇದೆ, ಅಂದರೆ, ಭಾರತದ ರೂಪಾಯಿ ಮೌಲ್ಯ 122,400 ಲಕ್ಷ ರೂ. ಅಷ್ಟೇ ಅಲ್ಲದೆ, 2019ರಿಂದ 2025ರ ನಡುವೆ ಶೇ.5.0 ಸಿಎಜಿಆರ್ ಪ್ರಗತಿಯಾಗಿದೆ. ಇನ್ನು ರಫ್ತು ವಿಚಾರಕ್ಕೆ ಬಂದರೆ ಜರ್ಮನಿ ಅತೀ ಹೆಚ್ಚು ರಫ್ತು ಮಾಡುತ್ತೆ. ಇದು ಜಾಗತಿಕವಾದರೆ ಭಾರತದಲ್ಲಿ ಕ್ಯಾಪ್ಸಿಕಂ ಪ್ರತಿ ಕಿಲೋಗ್ರಾಂಗೆ 1.77 ಯುಎಸ್ ಡಾಲರ್, ಅಂದರೆ ಕೆ.ಜಿಗೆ 141 ರೂ.

ಕರ್ನಾಟಕದಲ್ಲಿ ಹೆಚ್ಚು ಕ್ಯಾಪ್ಸಿಕಂ ಕೃಷಿ: ಭಾರತದ ತರಕಾರಿಗಳ ಪಟ್ಟಿಯಲ್ಲಿ ಒಂದು ಸ್ಥಾನವನ್ನು ಹೊಂದಿರುವಂತಹ ಕ್ಯಾಪ್ಸಿಕಂ ಕೇವಲ ತರಕಾರಿಯಾಗಿ ಉಪಯೋಗವಾಗದೆ ಆರೋಗ್ಯಕರವಾಗಿಯೂ ಬಳಸಬಹುದು. ಯಾಕಂದರೆ ಇದನ್ನು ಬಳಸುವುದರಿಂದ ದೇಹಕ್ಕೆ ಅಗತ್ಯವಾದ ವಿಟಮಿನ್ - ಎ, ವಿಟಮಿನ್ - ಸಿ, ಕ್ಯಾಲ್ಸಿಯಂ, ರಂಜಕ, ಪೋಟಾಶಿಯಂ ಕೂಡ ದೊರೆಯುವುದರಿಂದ ಹೆಚ್ಚು ಬೇಡಿಕೆ ಹೊಂದಿದೆ. ಭಾರತದಲ್ಲಿ ಸರಿ ಸುಮಾರು 45 ಸಾವಿರಕ್ಕೂ ಹೆಚ್ಚು ಹೇಕ್ಟರ್ ಪ್ರದೇಶದಲ್ಲಿ ಈ ಬೆಳೆ ಕೃಷಿ ಮಾಡಲಾಗುತ್ತಿದೆ. 327 ಸಾವಿರ ಟನ್ ಉತ್ಪಾದನೆ ಮಾಡಲಾಗುತ್ತಿದೆ. ಪ್ರಮುಖವಾಗಿ ಕರ್ನಾಟಕ, ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ ಗುಡ್ಡಗಾಡು ಪ್ರದೇಶದಲ್ಲಿ ಈ ಕೃಷಿ ಮಾಡಲಾಗುತ್ತಿದೆ. ಆದರೆ, ಕರ್ನಾಟಕದಲ್ಲಿಯೇ ಹೆಚ್ಚು ಕ್ಯಾಪ್ಸಿಕಂ ಕೃಷಿ ಮಾಡಲಾಗುತ್ತಿದ್ದು, ಸರಿಸುಮಾರು 4130 ಹೆಕ್ಟರ್ ಪ್ರದೇಶದಲ್ಲಿ 82 ಸಾವಿರ ಟನ್ ಕ್ಯಾಪ್ಸಿಕಂ ಉತ್ಪಾದಿಸಲಾಗುತ್ತದೆ. ಹೀಗೆ ಬೇಡಿಕೆ ಮತ್ತು ಉತ್ತಮ ಪ್ರಗತಿ ನೋಡಿದಾಗ ಪ್ರತಿಯೊಬ್ಬ ರೈತರು ಕೂಡ ಈ ಕೃಷಿ ಮಾಡಿ ಯಶಸ್ಸು ಸಾಧಿಸುವುದಕ್ಕೆ ಅವಕಾಶ ಇದೆ.

ಕಲರ್ ಕ್ಯಾಪ್ಸಿಕಂ ಖರ್ಚು-ಲಾಭದ ಲೆಕ್ಕಚಾರ: ಮೆಣಸಿನ ಜಾತಿಗೆ ಸೇರಿದ ಹಾಗೂ ಎಲ್ಲ ಪ್ರದೇಶದಲ್ಲಿ ಬೆಳೆಯಲು ಸಾಧ್ಯವಾಗುವಂಥ ಕ್ಯಾಪ್ಸಿಕಂ, ನಾಟಿ ಮಾಡಿದ 50-65 ದಿನಗಳಲ್ಲಿ ಕಾಯಿ ಕಟಾವು ಮಾಡಬಹುದು. ಸುಮಾರು 6 ತಿಂಗಳ ಕಾಲ ನಿರಂತರವಾಗಿ ಇಳುವರಿ ನೀಡುತ್ತದೆ. ಒಂದು ಸಸಿಯಿಂದ ವರ್ಷಕ್ಕೆ 10 ಕೆ.ಜಿ. ಕಾಯಿ ಇಳುವರಿ ಬರುವುದರಿಂದ ಎಕರೆಗೆ 35 ಟನ್ ಇಳುವರಿ ಪಡೆಯಲು ಸಾಧ್ಯ. ಒಂದು ಕೆ.ಜಿ. ಕ್ಯಾಪ್ಸಿಕಂಗೆ 50 ರೂ. ಅಂಥ ಮಾರಾಟ ಮಾಡಿದರೂ 35 ಟನ್‌ಗೆ 17 ಲಕ್ಷಕ್ಕೂ ಅಧಿಕ ಆದಾಯ ಬರುತ್ತದೆ. ಇದರಲ್ಲಿ ಬೀಜ, ಸಸಿ, ಪಾಲಿಹೌಸ್, ಕಾರ್ಮಿಕರು, ನೀರು, ಗೊಬ್ಬರ ಹಾಗೂ ರಾಸಾಯನಿಕಗಳು ಸೇರಿ ಸುಮಾರು 5 ಲಕ್ಷ ರೂ. ಖರ್ಚು ತೆಗೆದ್ರು ವರ್ಷಕ್ಕೆ 12 ಲಕ್ಷ ರೂ. ರೈತರ ಕೈ ಸೇರುತ್ತೆ. ಇಷ್ಟೇ ಅಲ್ಲದೆ, ಕ್ಯಾಪ್ಸಿಕಂಗೆ ಬೇಡಿಕೆ ಹೆಚ್ಚುತ್ತಿರುವುದರಿಂದ ಅದರ ಸಸಿಗಳನ್ನು ನರ್ಸರಿ ಮಾಡಿ ಬೆಳೆಸಿ ಅದನ್ನೂ ಮಾರಾಟ ಮಾಡಿ ಉತ್ತಮ ಆದಾಯ ಗಳಿಸಬಹುದು.

ಸರ್ಕಾರದ ಸೌಲಭ್ಯ: ಗುಣಮಟ್ಟದ ಕಾಯಿಗಳಿಗೆ ಹೆಚ್ಚು ಬೇಡಿಕೆ ಇರುವುದರಿಂದ ಕ್ಯಾಪ್ಸಿಕಂ ಕೃಷಿ ಪಾಲಿಹೌಸ್‌ನಲ್ಲಿ ಮಾಡುವುದರಿಂದ ಇಳುವರಿ ಕೂಡ ಹೆಚ್ಚುತ್ತೆ. ಈ ಕೃಷಿಗೆ ಗ್ರಾಮೀಣ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ದೊರೆಯುತ್ತದೆ ಹಾಗೂ ಸಂಬಂಧಿತ ಇಲಾಖೆಯಿಂದ ಸಹಾಯಧನ ಕೂಡ ಸಿಗಲಿದೆ.

ffreedom appನಲ್ಲಿ ಕಲರ್ ಕ್ಯಾಪ್ಸಿಕಂ ಕೋರ್ಸ್: ಪ್ರತಿಯೊಬ್ಬ ರೈತರು ಆದಾಯವನ್ನು 10 ಪಟ್ಟು ಹೆಚ್ಚಿಸಿಕೊಳ್ಳಬೇಕು. ಅವರೂ ಆರ್ಥಿಕ ಸ್ವಾತಂತ್ರ ಕಂಡುಕೊಳ್ಳಬೇಕು ಎಂಬ ಉದ್ದೇಶದಿಂದ ffreedom app ಕಲರ್ ಕ್ಯಾಪ್ಸಿಕಂ ಕೋರ್ಸ್ ಸಿದ್ಧಪಡಿಸಿದೆ. ಹಲವು ವರ್ಷಗಳಿಂದ ಕ್ಯಾಪ್ಸಿಕಂ ಕೃಷಿ ಮಾಡುತ್ತಿರುವ ಕೋಲಾರ ಜಿಲ್ಲೆ ಕೋಟಿಗಾನಹಳ್ಳಿಯ ಪ್ರಗತಿಪರ ರೈತ ಪ್ರಕಾಶ್ ಅವರೇ ನಿಮಗೆ ಮಾರ್ಗದರ್ಶನ ನೀಡುತ್ತಾರೆ. ಜತೆಗೆ ನೀವು ffreedom appನಲ್ಲಿ ಕೃಷಿ, ಬಿಸಿನೆಸ್ ಮತ್ತು ಹಣಕಾಸಿಗೆ ಸಂಬಂಧಿಸಿದ 900ಕ್ಕೂ ಹೆಚ್ಚು ಕೋರ್ಸ್‌ಗಳನ್ನು ವೀಕ್ಷಿಸಬಹುದು. ಇಷ್ಟೇ ಅಲ್ಲದೆ, ಯಶಸ್ವಿ ಮಾರ್ಗದರ್ಶಕರಿಂದ ಮಾರ್ಗದರ್ಶನ ಪಡೆದು ನೀವೂ ಶ್ರೀಮಂತಿಕೆಯ ಪ್ರಯಾಣ ಆರಂಭಿಸಬಹುದು.

ಕೋರ್ಸ್‌ನಲ್ಲಿ ಏನೇನಿದೆ?

• ಕೋರ್ಸ್ ಪರಿಚಯ • ಮಾರ್ಗದರ್ಶಕರ ಪರಿಚಯ • ಏನಿದು ಕಲರ್ ಕ್ಯಾಪ್ಸಿಕಂ ಕೃಷಿ? • ಬಂಡವಾಳ, ಸಾಲ, ಸರ್ಕಾರದ ಸೌಲಭ್ಯ • ಗ್ರೀನ್ ಹೌಸ್ • ಭೂಮಿ, ಮಣ್ಣು ಮತ್ತು ವಾತಾವರಣ • ನಾಟಿ ಮತ್ತು ಕಾರ್ಮಿಕರು • ಕ್ಯಾಪ್ಸಿಕಂ ಜೀವನ ಚಕ್ರ • ನೀರು, ಗೊಬ್ಬರ, ರೋಗ ನಿಯಂತ್ರಣ • ಕಟಾವು ಮತ್ತು ಶೇಖರಣೆ • ಖರ್ಚು ಮತ್ತು ಲಾಭ • ಸವಾಲು, ಮಾರ್ಗದರ್ಶಕರ ಕಿವಿಮಾತು

ಉದ್ಯೋಗಾವಕಾಶ

ಮನೆಯಿಂದಲೇ ಉದ್ಯೋಗ ಮಾಡಬಯಸುವವರಿಗೆ ffreedom appನಲ್ಲಿ ಸುವರ್ಣ ಅವಕಾಶವಿದೆ. ಉದ್ಯೋಗಾಕಾಂಕ್ಷಿಗಳು ಈ ನಂಬರಿಗೆ ಮಿಸ್ಡ್ ಕಾಲ್ ಮಾಡಿ - 02262116777.